# ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗ

## ಗ್ರಾಮೀಣ ಕೃಷಿ ಹವಾಮಾನ ಸೇವಾ ಯೋಜನೆ

## ದಕ್ಷಿಣ ಕನ್ನಡ ಜಿಲ್ಲೆಯ ಕೃಷಿ ಹವಾಮಾನ ಸಲಹಾ ಸೂಚಕ

(ಭಾರತೀಯ ಹವಾಮಾನ ಇಲಾಖೆ ಪುಣೆ ಮತ್ತು ಬೆಂಗಳೂರು ಹಾಗೂ ಗ್ರಾಮೀಣ ಕೃಷಿ ಹವಾಮಾನ ಸೇವಾ ಯೋಜನೆ, ಬ್ರಹ್ಮಾವರ–576213, ಉಡುಪಿ ಜಿಲ್ಲೆ ಕರ್ನಾಟಕ ಇವರ ಜಂಟಿ ಪ್ರಸಾರ)

**ಹವಾಮಾನ ಮುನ್ಸೂಚನೆಯ ಅವಧಿ 07-06-2023 ರಿಂದ 11-06-2023**

ಸಂ. ಗ್ರಾ.ಕೃ.ಹ.ಸೇ.ಬ/040/2023 — ದಿನಾಂಕ: 06.06.2023

ಭಾರತೀಯ ಹವಾಮಾನ ಇಲಾಖೆ ಪುಣೆ ಮತ್ತು ಬೆಂಗಳೂರು, ಇವರು ದಕ್ಷಿಣ ಕನ್ನಡ ಜಿಲ್ಲೆಗೆ ಮುಂದಿನ ಐದು ದಿನಗಳು ದಿನಾಂಕ 07-06-2023 ರಿಂದ 11-06-2023 ರ ವರೆಗೆ ಲಭ್ಯವಿರುವ ಹವಾಮಾನ ಮುನ್ಸೂಚನೆ ಈ ಕೆಳಕಂಡಂತೆ ನೀಡಿರುತ್ತಾರೆ

| ಹವಾಮಾನದ ಅಂಶಗಳು | ಕ್ರೂಢೀಕರಿಸಿದ ಹವಾಮಾನ ಮುನ್ಸೂಚನೆ | | | | | ಹಿಂದಿನ ವಾರದ ಹವಾಮಾನ ಪರಿಸ್ಥಿತಿಯ ಒಟ್ಟು/ಸರಾಸರಿ | ಮುಂದಿನ ಐದು ದಿನಗಳ ಹವಾಮಾನ ಮುನ್ಸೂಚನೆಯ ಒಟ್ಟು/ಸರಾಸರಿ |
|---|---|---|---|---|---|---|---|
| | ದಿನ–1 (07.06.2023) | ದಿನ–2 (08.06.2023) | ದಿನ–3 (09.06.2023) | ದಿನ–4 (10.06.2023) | ದಿನ–5 (11.06.2023) | | |
| ಮಳೆ ಪ್ರಮಾಣ (ಮಿ.ಮೀ.) | 15 | 14 | 35 | 15 | 37 | 0 | 116↑ |
| ಗರಿಷ್ಠ ಉಷ್ಣಾಂಶ (°C) | 32 | 34 | 34 | 33 | 33 | 35.7 | 33↓ |
| ಕನಿಷ್ಠ ಉಷ್ಣಾಂಶ (°C) | 22 | 21 | 20 | 21 | 20 | 24.8 | 21↓ |
| ಮೋಡದ ಹೊದಿಕೆ (ಒಕ್ಟಾ) | 7 | 6 | 7 | 7 | 6 | 4 | 7↑ |
| ಗರಿಷ್ಠ ಆರ್ದ್ರತೆ (ಶೇ.) | 90 | 86 | 87 | 89 | 89 | 73 | 88.2↑ |
| ಕನಿಷ್ಠ ಆರ್ದ್ರತೆ (ಶೇ.) | 54 | 48 | 50 | 58 | 59 | 53.6 | 53.8↑ |
| ಗಾಳಿಯ ವೇಗ (Kmph) | 7 | 7 | 7 | 7 | 7 | 6.8 | 7↑ |
| ಗಾಳಿಯ ದಿಕ್ಕು (°) | 180 | 243 | 135 | 158 | 169 | 284 | 177↓ |
| ಮುನ್ಸೂಚನೆ | ISL | SCT | FWS | FWS | FWS | | |
| ಸಂಭವನೀಯತೆ (%) | 1-25 | 26-50 | 51-75 | 51-75 | 51-75 | | |

**ಭಾರತ ಹವಾಮಾನ ಇಲಾಖೆ, ನವದೆಹಲಿ ಮತ್ತು ರಾಜ್ಯ ಹವಾಮಾನ ಇಲಾಖೆ, ಬೆಂಗಳೂರು ಇವರು ನೀಡಿರುವ ವಿಸ್ತೃತ ಮಳೆ ಮುನ್ಸೂಚನೆಯ ಪ್ರಕಾರ ಕರ್ನಾಟಕದ ಕರಾವಳಿ ತೀರ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗೆ ದಿನಾಂಕ 11.06.2023 ರಿಂದ 17.06.2023 ರವರೆಗೆ ವಾಡಿಕೆ ಮಳೆಯಾಗುವ ಸಂಭವವಿದೆ.**

## ಹವಾಮಾನ ಪರಿಸ್ಥಿತಿ ಮತ್ತು ಮುನ್ಸೂಚನೆ ಸಾರಾಂಶ

ಭಾರತೀಯ ಹವಾಮಾನ ಇಲಾಖೆ ಪುಣೆ ಮತ್ತು ಬೆಂಗಳೂರು ಇವರು, ದಕ್ಷಿಣ ಕನ್ನಡ ಜಿಲ್ಲೆಗೆ ನೀಡಿದ ಮುನ್ಸೂಚನೆಯ ಪ್ರಕಾರ, **ಮುಂದಿನ ಐದು ದಿನಗಳಲ್ಲಿ ಮೋಡಕವಿದ ವಾತಾವರಣವಿದ್ದು, ಹಲವೆಡೆ ಹಗುರದಿಂದ ಭಾರೀ ಮಳೆಯಾಗುವ ಸಂಭವವಿದೆ.** ಮುಂದಿನ ಐದು ದಿನಗಳಲ್ಲಿ ಗರಿಷ್ಠ ತಾಪಮಾನವು **32-34$^{o}$C** ಇರುತ್ತದೆ ಮತ್ತು ಕನಿಷ್ಠ ತಾಪಮಾನವು **20-22$^{o}$C** ಇರುತ್ತದೆ. ಸರಾಸರಿ ಸಾಪೇಕ್ಷ ಆದ್ರತೆಯು ಬೆಳಗಿನ ಸಮಯದಲ್ಲಿ **86%** ರಿಂದ **90%** ರಷು ಇರುತ್ತದೆ. ಹಾಗೂ ಮಧ್ಯಾಹ್ನದ ಸಮಯದಲ್ಲಿ **48%** ರಿಂದ **59%** ರಷ್ಟು ಇರುತ್ತದೆ. ಸರಾಸರಿ ಗಾಳಿಯ ವೇಗವು **7** ಕೀ.ಮೀ. ಪ್ರತಿ ಘ,ವೇಗದಲ್ಲಿ ಬೀಸಲಿದೆ. ಈ ಹವಾಮಾನ ಪರಿಸ್ಥಿತಿಯನ್ನು ಪರಿಗಣಿಸಿದರೆ, ರೈತರು ಈ ಕೆಳಕಂಡ ಕೃಷಿ ಸಲಹೆಗಳನ್ನು ಅನುಸರಿಸುವಂತೆ ಸಲಹೆ ನೀಡಲಾಗಿದೆ.

**Mobile Applications developed by India Meteorological Department for the benefit of Farming Community Farmers are suggested to download the app using below links**

| | Mausam: | Meghdoot: | Damini: |
|---|---|---|---|
| Andriod: | https://play.google.com/store/apps/details?id=com.imd.masuam | https://play.google.com/store/apps/details?id=com.aas.meghdoot | https://play.google.com/store/apps/details?id=com.lightening.live.damini |
| Apple OS: | https://apps.apple.com/us/app/id1522893967 | https://apps.apple.com/in/app/meghdoot/id1474048155 | https://apps.apple.com/app/id1502385645 |

**Decadal Rainfall (mm) Comparison:**

| Year | 30 years Mean | 2012 | 2013 | 2014 | 2015 | 2016 | 2017 | 2018 | 2019 | 2020 | 2021 | 2022 | 2023 |
|---|---|---|---|---|---|---|---|---|---|---|---|---|---|
| Rainfall | 3792.9 | 2984.2 | 3325.3 | 2816.3 | 2383.4 | 2827.1 | 3000 | 3381.2 | 4118.4 | 4110.8 | 4110.8 | 3879.9 | 50.6 |
| Rainy days | 110 | 105 | 127 | 112 | 107 | 119 | 121 | 112 | 123 | 126 | 152 | 125 | 2 |

# ದಕ್ಷಿಣ ಕನ್ನಡ ಜಿಲ್ಲೆಗೆ ನೀಡಿದ ಹವಾಮಾನ ಮುನ್ಸೂಚನೆ ಆಧಾರಿಸಿ ನೀಡಿದ ಕೃಷಿ ಸಲಹೆಗಳು

## ತೋಟಗಾರಿಕೆ ಬೆಳೆಗಳು:

| ಬೆಳೆ | ಕೃಷಿ ಸಲಹೆಗಳು |
|---|---|
| ಅಡಿಕೆ (ನೀರಿನ ನಿರ್ವಹಣೆ) | ತಾಪಮಾನ ಹೆಚ್ಚಿರುವ ಕಾರಣದಿಂದ ಬೆಳೆಗೆ ಅಗತ್ಯ ಪ್ರಮಾಣದ ನೀರನ್ನು ನೀಡುವುದು ಹಾಗೂ ಬೆಳೆಗಳ ಅವಶೇಷಗಳನ್ನು ಬುಡದ ಸುತ್ತ ಹಾಕುವುದರಿಂದ ತೇವಾಂಶ ಸಂರಕ್ಷಣೆಯಾಗುವುದು. ರೈತರು ಶೇ.1 ರ ಬೋರ್ಡೋ ದ್ರಾವಣವನ್ನು ಸಿಂಪಡಿಸಲು ಸೂಕ್ತ ಸಮಯ. |
| ಅಡಿಕೆ (ಸುಳಿ ತಿಗಣೆ) | ರೈತರು ಸುಳಿ ತಿಗಣೆ ನಿರ್ವಹಣೆ ಮಾಡಲು 1.7 ಮಿ.ಲೀ ನಷ್ಟು ಡೈಮೆಥೋಯೇಟ್ ಅನ್ನು ಪ್ರತಿ ಲೀಟರ್ ನೀರಿಗೆ ಬೆರಸಿ ಸಿಂಪಡಿಸುವುದು ಸೂಕ್ತ. |
| ಅಡಿಕೆ ( ಕೆಂಪು ನುಸಿ) | ಅಡಿಕೆಯಲ್ಲಿ ನುಸಿಯ ಭಾದೆ ತಗ್ಗಿಸಲು ಪ್ರತಿ ಲೀಟರ್ ನೀರಿಗೆ 1 ಮಿ.ಲೀ ಪ್ರೋಫೈರ್‌ಗೈಟ್ ಅನ್ನು ಪ್ರತಿ ಲೀಟರ್ ನೀರಿಗೆ ಮಿಶ್ರಿಸಿ ಸಿಂಪಡಿಸುವುದು ಸೂಕ್ತ |
| ಅಡಿಕೆ (ಇಂಗಾರ ಒಣಗುವ ರೋಗ) | ರೈತರು ಇಂಗಾರ ಒಣಗುವ ರೋಗವನ್ನು ನಿಯಂತ್ರಣ ಮಾಡಲು ಕಾರ್ಬೆಂಡೈಜಿಮ್+ಮ್ಯಾಂಕೋಜೆಬ್ ಅನ್ನು 2ಗ್ರಾಂ ಪ್ರತಿ ಲೀಟರ್ ನೀರಿಗೆ ಮಿಶ್ರಿಸಿ ಸಿಂಪಡಿಸುವುದು ಸೂಕ್ತವಾಗಿದೆ. |
| ತೆಂಗು (ನೀರಿನ ನಿರ್ವಹಣೆ) | ತಾಪಮಾನ ಹೆಚ್ಚಿರುವ ಕಾರಣದಿಂದ ಬೆಳೆಗೆ ಅಗತ್ಯ ಪ್ರಮಾಣದ ನೀರನ್ನು ನೀಡುವುದು ಹಾಗೂ ಬೆಳೆಗಳ ಅವಶೇಷಗಳನ್ನು ಬುಡದ ಸುತ್ತ ಹಾಕುವುದರಿಂದ ತೇವಾಂಶ ಸಂರಕ್ಷಣೆಯಾಗುವುದು. |
| ತೆಂಗು (ಕುರುವಾಯಿ ದುಂಬಿ) | ಕುರುವಾಯಿ ದುಂಬಿ ನಿಯಂತ್ರಣ ಮಾಡಲು ಕ್ಲೋರೊಫೈರಿಫಾಸ್‌ಹರಳನ್ನು ವ್ಮರಳಿನ ಜೊತೆ ಮಿಶ್ರಣ ಮಾಡಿ ಸುಳಿ ಭಾಗಕ್ಕೆ ಹಾಕುವುದು. ಕುರುವಾಯಿ ಹುಳುಗಳನ್ನು ಸಂಗ್ರಹಿಸಿ ನಾಶಪಡಿಸುವುದು ಹಾಗೂ ತೆಂಗಿನ ತೋಟದಲ್ಲಿ ಸ್ವಚ್ಛತೆಯನ್ನು ಕಾಪಾಡುವುದು. ಕುರುವಾಯಿ ದುಂಬಿಗಳ ಸಂತಾನೋತ್ಪತ್ತಿಯ ಮೂಲಗಳನ್ನು ನಾಶಪಡಿಸುವುದು. |
| ತೆಂಗು (ಕಾಂಡ ಸೋರುವ ರೋಗ) | ಕಾಂಡ ಸೋರುವ ರೋಗ ನಿಯಂತ್ರಣ ಮಾಡಲು ರೈತರು ಕಾಂಡ ಭಾಗವನ್ನು ಕೆತ್ತಿದ ನಂತರ ಶೇಕಡ 10ರ ಬೋರ್ಡೋ ಪೇಸ್ಟನ್ನು ಹಚ್ಚಬೇಕು ಅಥವಾ 2 ಮಿ.ಲೀ ಹೆಕ್ಸಾಕೊನಜೋಲ್ ಅನ್ನು ಪ್ರತಿ ಲೀಟರ್ ನೀರಿಗೆ ಬೆರಸಿ ಬುಡಕ್ಕೆ ಸುರಿಯುವುದು (ಪ್ರತಿ ಮರಕ್ಕೆ 3ಲೀಟರ್) |
| ಬಾಳೆ (ಸಾಮಾನ್ಯ ಸಲಹೆ) | 5 ತಿಂಗಳ ನಂತರ ಪ್ರತಿ ಲೀಟರ್ ನೀರಿಗೆ 5ಗ್ರಾಂ. ಬನಾನ ಸ್ಪೆಷಲ್(ಲಘು ಪೋಷಕಾಂಶ) ಮಿಶ್ರಿಸಿ ಸಿಂಪಡಿಸುವುದು. (15ಲೀ. ಸ್ಪ್ರೇಯರ್‌ಗೆ ಒಂದು ನಿಂಬೆ ಹಣ್ಣು ಹಾಗೂ ಒಂದು ಶಾಂಪೂವನ್ನು ಬೆರೆಸಬೇಕು) |
| ಕಾಳುಮೆಣಸು (ನೀರಿನ ನಿರ್ವಹಣೆ) | ತಾಪಮಾನ ಹೆಚ್ಚಿರುವ ಕಾರಣದಿಂದ ಬೆಳೆಗೆ ಅಗತ್ಯ ಪ್ರಮಾಣದ ನೀರನ್ನು ನೀಡುವುದು ಹಾಗೂ ಬೆಳೆಗಳ ಅವಶೇಷಗಳನ್ನು ಬುಡದ ಸುತ್ತ ಹಾಕುವುದರಿಂದ ತೇವಾಂಶ ಸಂರಕ್ಷಣೆಯಾಗುವುದು. |
| ಗೋಡಂಬಿ (ಕಟಾವು) | ಹಣ್ಣಿನ ಕೊಯ್ಲು ಪ್ರಾರಂಭವಾಗಿದ್ದು, ಪೂರ್ತಿಯಾಗಿ ಮಾಗಿದ ಹಣ್ಣಿನಿಂದ ಮಾತ್ರ ಬೀಜವನ್ನು ತೆಗೆಯಬೇಕು. |

## ಕ್ಷೇತ್ರ ಬೆಳೆಗಳು:

| | |
|---|---|
| ಭತ್ತದ ಪಾಳು (ಸಾಮಾನ್ಯ ಸಲಹೆ) | ತೇವಾಂಶ ಆಧಾರಿಸಿ ಭೂಮಿ ಸಿದ್ದತೆ ಮಾಡಿ ಹಸಿರೆಲೆ ಗೊಬ್ಬರದ ಬೀಜಗಳಾದ ಡಯೆಂಚ ಅಥವಾ ಸೆಣಬನ್ನು ಬಿತ್ತನೆ ಮಾಡುವುದು ಇದರಿಂದ ಭೂಮಿಯ ಫಲವತ್ತತೆಯೂ ಸಹ ಹೆಚ್ಚುತ್ತದೆ. |

## ಜಾನುವಾರು ಸಲಹೆ:

| | |
|---|---|
| ಹಸು (ಸಾಮಾನ್ಯ ಸಲಹೆ) | ➢ ಹೊಸದಾಗಿ ಜನಿಸಿದ ಕರುಗಳಿಗೆ ಜಂತುನಾಶಕಗಳನ್ನು ನೀಡುವುದು ಸೂಕ್ತ<br>➢ ಹಾಲು ಹಿಂಡುವ ರಾಸುಗಳಲ್ಲಿ ಹೆಚ್ಚಿನ ಹಾಲು ಪಡೆಯಲು ಸಮತೋಲಿತ ಆಹಾರವನ್ನು ನೀಡಬೇಕು.<br>➢ ಪ್ರಾಣಿಗಳಲ್ಲಿ ಅಗತ್ಯವಾದ ಲವಣಾಂಶಗಳ ನಷ್ಟವನ್ನು ತಪ್ಪಿಸಲು ಸೂಕ್ತ ಪ್ರಮಾಣದಲ್ಲಿ ಉಪ್ಪನ್ನು ಆಹಾರದಲ್ಲಿ ಹಾಗೂ ನೀರಿನಲ್ಲಿ ಬೆರೆಸಿ ಪ್ರಾಣಿಗಳಿಗೆ ನೀಡುವುದು. |

## ಜಾನುವಾರು ಸಲಹೆ:

| | |
|---|---|
| ಮಣ್ಣು ಆರೋಗ್ಯ ನಿರ್ವಹಣೆ | ➢ ರೈತರು ತಮ್ಮ ಜಮೀನಿನ ಮಣ್ಣು ಪರೀಕ್ಷೆ ಮಾಡಿಸಲು ಸೂಕ್ತ ಸಮಯವಾಗಿದೆ. |

(ಈ ಮೇಲಿನ ಬೆಳೆ ಸಲಹೆಯು ಹವಾಮಾನ ಇಲಾಖೆ, ಬೆಂಗಳೂರು ಇವರು ನೀಡಿರುವ ಹವಾಮಾನ ಮುನ್ಸೂಚನೆಯ ಆಧಾರವಾಗಿದೆ)

ಶ್ರೀ. ಪ್ರವೀಣ್ ಕೆ.ಎಮ್,
ತಾಂತ್ರಿಕ ಅಧಿಕಾರಿಗಳು,
ಜಿ.ಕೆ.ಎಮ್.ಎಸ್–ವಿಭಾಗ,
ವ.ಕೃ.ತೋ.ಸಂ.ಕೇ–ಬ್ರಹ್ಮಾವರ.

ಡಾ. ಕೆ. ವಿ. ಸುಧೀರ್ ಕಾಮತ್,
ನೊಡಲ್ ಅಧಿಕಾರಿಗಳು,
ಜಿ.ಕೆ.ಎಮ್.ಎಸ್–ವಿಭಾಗ,
ವ.ಕೃ.ತೋ.ಸಂ.ಕೇ–ಬ್ರಹ್ಮಾವರ.